ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

೧೪. ಚಿಕ್ಕನಾಯಕನ ಹಳ್ಳಿಯಿಂದ ಹೊನ್ನೆಬಾಗಿ ಗ್ರಾಮಕ್ಕೆ ಅಡ್ಡಲಾಗಿ ಹರಿಯುವ ಜೋಗಿಹಳ್ಳಿ ಹಳ್ಳಕ್ಕೆ ಸೇತುವೆ ನಿರ್ಮಾಣಕ್ಕೆ ಒತ್ತಾಯ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನ ಹಳ್ಳಿಯಿಂದ ಹೊನ್ನೇಬಾಗಿ ಗ್ರಾಮದ ಮೂಲಕ ಹೋಗುವ ಮುಖ್ಯ ರಸ್ತೆಗೆ ಅಡ್ಡಲಾಗಿ ಹರಿಯುವ ಜೋಗಿಹಳ್ಳಿ ಹಳ್ಳಕ್ಕೆ ಒಂದು ಸೇತುವೆ ಅತ್ಯವಶ್ಯವಿದ್ದು ಇದಕ್ಕೆ ಸರ್ಕಾರ ಹಣವನ್ನು ಮಂಜೂರು ಮಾಡಿ ವರ್ಷಗಳು ಕಳೆದರೂ ಸಹ ಇದರ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಚಿಕ್ಕನಾಯಕನ ಹಳ್ಳಿ ಜಿಲ್ಲಾ ಪರಿಷತ್ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಕೇಳಿದರೆ ಕಂಟ್ರಾಕ್ಟರ್‌ಗೆ ಕೊಡಲು ಆಗತ್ಯ ಸಿಮೆಂಟ್, ಹಣ ಸರ್ಕಾರದಿಂದ ಬಂದಿಲ್ಲದೇ ಇರುವುದರಿಂದ ಕಾಮಗಾರಿ ಪ್ರಾರಂಭಿಸಿಲ್ಲ ಎನ್ನುತ್ತಾರೆ. ಇದರ ಕಂಟ್ರಾಕ್ಟರ್‌ನ್ನು ಕೇಳಿದರೆ ಎರಡು ಸಾರಿ ಪಾಯ ಮಾಡಿ ಸಿಮೆಂಟ್ ಕೊಡದ ಕಾರಣ ಮುಚ್ಚಿ ಹೋಗಿದೆ, ನನಗೆ ಸಿಮೆಂಟ್‌ನ್ನು ಕೊಡದ ಕಾರಣ ನಷ್ಟ ಆಗಿದೆ ಸರ್ಕಾರದಿಂದ ಸಿಮೆಂಟ್ ಮತ್ತು ಹಣವನ್ನು ಕೊಟ್ಟರೆ ಬೇಗ ಮುಗಿಸಿಕೊಡುವುದಾಗಿ ಹೇಳುತ್ತಾರೆ. ಶಾಲೆ, ಕಾಲೇಜಿಗೆ ಹೋಗುವ ಮಕ್ಕಳು ಮತ್ತು ಚಿಕ್ಕನಾಯಕನ ಹಳ್ಳಿ ನಗರಕ್ಕೆ ದಿನನಿತ್ಯದ ವ್ಯವಹಾರಕ್ಕೆ ಬಂದು ಹೋಗುವ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ವಿಶೇಷ ಆದ್ಯತೆಯಮೇಲೆ ಹಣ ಮತ್ತು ಸಿಮೆಂಟ್ ಕೊಟ್ಟು ಬೇಗ ಈ ಸೇತುವೆ ಕಾರ್ಯ ಮುಗಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಸರ್ಕಾರದಿಂದ ಉತ್ತರವನ್ನು ತರಿಸಿಕೊಡುತ್ತೇನೆ.

೧೫. ಬೈಲಹೊಂಗಲ ತಾಲ್ಲೂಕಿನ ನೇಸರ್ಗಿ ಗ್ರಾಮದಲ್ಲಿ ಟ್ರೈಡಿ.ಬಿ. ಆಸ್ಪತ್ರೆಯಲ್ಲಿ ಖಾಲಿಯಿರುವ ಡಾಕ್ಟರ ಹುದ್ದೆ ಯನ್ನು ಭರ್ತಿ ಮಾಡುವುದು

ಶ್ರೀ ಶಿವಾನಂದ ಪೆಟ್, ಕೌಜಲಗಿ.—ಮಾನ್ಯ ಅಧ್ಯಕ್ಷರೇ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರಗಿ ಗ್ರಾಮದಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಂಗ್‌ಗೆ ಸೇರಿದ ಮೊದಲಿದ್ದ ಎಲ್ ಎಂ.ಪಿ. ಡಾಕ್ಟರರು ರಾಜೀನಾಮೆ ಕೊಟ್ಟಿದ್ದು ಅಲ್ಲಿ ಈಗ ಡಾಕ್ಟರು ಇಲ್ಲದೆ ಜನರಿಗೆ ಬಹಳ ತ್ರಾಸು ಆಗಲಿಕ್ಕೆ ಹತ್ತಿದೆ. ಮತ್ತು ಅಲ್ಲಿ ಮೆಟರ್ನಿಟಿ ದವಾಖಾನೆಗೂ ಡಾಕ್ಟರರು ಇಲ್ಲದೆ ಅದು ಹಾಳಾಗಲಿಕ್ಕೆ ಹತ್ತಿದೆ. ಇಲ್ಲಿಗೆ ಕೂಡಲೇ ಒಬ್ಬ ಎಂ.ಬಿ.ಬಿ.ಎಸ್. ಆದ ಡಾಕ್ಟರರನ್ನು ಪೋಸ್ಟಿಂಗ್ ಮಾಡಬೇಕು, ಮತ್ತು ಈಗ ಸಧ್ಯಕ್ಕೆ ಬೈಲಹೊಂಗಲ ತಾಲ್ಲೂಕು ಪೈಕಿ ನಾಗನೂರು ಪಿ.ಹೆಚ್.ಸಿ. ದವಾಖಾನೆಯಲ್ಲಿ ೩ ಜನ ಡಾಕ್ಟರರು ಇದ್ದು ಅಲ್ಲಿಯ ಡಾಕ್ಟರರಿಗೆ ಹೆಚ್ಚಿನ ಕೆಲಸ ಸಹ ಇರುವುದಿಲ್ಲ. ಆದ ಕಾರಣ ಕೂಡಲೇ ಅಲ್ಲಿಗೆ ತುರ್ತಾಗಿ ಖಾಯಂ ಒಬ್ಬ ಡಾಕ್ಟರನ್ನು ಹಾಕಲು ನಾನು ತಮ್ಮ ಮುಖಾಂತರ ಆರೋಗ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ನೇಸರ್ಗಿಯಲ್ಲಿನ ಮೆಟರ್‌ನಿಟಿ ಹೋಂನನ್ನು ಸರ್ಕಾರವು ೧೯೮೧ರಲ್ಲಿ ತೆಗೆದುಕೊಂಡಿದೆ. ಈ ಮೆಟರ್‌ನಿಟಿ ಹೋಂನ ವೈದ್ಯರೊಬ್ಬರನ್ನಾಧಿದು ಬಾಕಿ ಎಲ್ಲಾ ಸಿಬ್ಬಂದಿ ವರ್ಗವನ್ನು ಈಗಾಗಲೇ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರು ಪಾರ್ಟ್‌ಟೈಂ ನೌಕರರಾಗಿದ್ದು ಖಾಯಂ ನೌಕರರಲ್ಲ. ನಿಗಧಿತ ಮೊಬಲಗಿನಲ್ಲಿ ಅಲ್ಪಾವಧಿ ಕಾರ್ಯನಿರ್ವಹಿಸುತ್ತಿದುದರಿಂದ ಇವರನ್ನು ಸರ್ಕಾರಿ ಸೇವೆಯಲ್ಲಿ ಪರಿಗಣಿಸಿಲ್ಲ. ಇಲ್ಲಿ ತಿಂಗಳಿಗೆ ೪೦೦-೦೦ ರೂಪಾಯಿಗಳ ನಿಗಧಿತ ಮೇಲೆ ಕೆಲಸ ಮಾಡುತ್ತಿದ್ದ ಸಬಸಿಡೈಸ್ ಮೆಡಿಕಲ್ ಪ್ರಾಕ್ಟೀಶನರ್ ಡಾ. ಬಿ. ವಿ. ದೇಸಾಯಿರವರು ಕೆಲಸಕ್ಕೆ ರಾಜೀನಾಮೆ ನೀಡಿದ್ದಾರೆ. ಬೇರೆಡೆಯಿಂದ ಇಲ್ಲಿಗೆ ಎಂ.ಬಿ.ಬಿ.ಎಸ್. ವೈದ್ಯರನ್ನು ಹಾಕಲು ಅವಕಾಶ ಇರುವುದಿಲ್ಲ. ಈ ಗ್ರಾಮಕ್ಕೆ ೪ ಕಿಲೋ ಮೀಟರ್ ದೂರದಲ್ಲಿದ್ದ ದೇಸನೂರು ಪ್ರಾಥಮಿಕ ಆರೋಗ್ಯ